## ಅಪರೂಪದವರೇ!

‘ಅಪರೂಪದ ರಂಗರತ್ನ’ (ಮಾ. 13, ಮಂಜುಶ್ರೀ ಎಂ. ಕಡಕೋಳ) ಲೇಖನದಲ್ಲಿ ನಾಗರತ್ನ ಅವರ ಬಗ್ಗೆ ಓದಿದಾಗ, ಎಂತೆಂಥ ಮಹನೀಯರು ಕರ್ನಾಟಕದ ಮೂಲೆಮೂಲೆಗಳಲ್ಲಿ ಕಂಗೊಳಿಸುತ್ತಿದ್ದಾರೆ ಎನ್ನಿಸಿತು.

—ವನಮಾಲಾ ಲಿಂಗರಾಜು ಯಲೆ

## ಸಮಯ ಸಿಕ್ಕೇ ಸಿಗುತ್ತದೆ

‘ಖಾಸಗಿ ಸಮಯ ದುಬಾರಿ ಹಾಗೂ ಮರೀಚಿಕೆಯೇ? ಇದು ಚೌಕಟ್ಟಿನಿಂದ ಹೊರಬರಲೇಬೇಕಾದ ಸಮಯ’ (ಮಾ. 13, ರಘುನಾಥ ಚ.ಹ.) ‘ನಿಮ್ಮೊಡನೆ’ ಬರಹ ಇಂದಿನ ವಾಸ್ತವವನ್ನು ಪರಿಣಾಮಕಾರಿಯಾಗಿ ಬಿಂಬಿಸಿದೆ.

ಮನುಷ್ಯ ಸಂತೋಷ ತನ್ನಲ್ಲೇ ಇದೆ ಎಂಬುದನ್ನು ಅರಿಯದೆ ಎಲ್ಲೆಲ್ಲೋ ಹುಡುಕುತ್ತಿದ್ದಾನೆ. ಒಟ್ಟಿನಲ್ಲಿ ಓಟವೇ ಗುರಿಯಾಗಿದೆ. ಸರಿಯಾದ ಯೋಜನೆ, ಯೋಚನೆ, ಸಮಯ ನಿರ್ವಹಣೆ, ತಾಳ್ಮೆ ಇದ್ದರೆ ಒಳ್ಳೆಯ ಊಟ, ನಿದ್ದೆ, ಆರೋಗ್ಯ, ದುಡಿಮೆಯಲ್ಲಿ ಯಶಸ್ಸು ಎಲ್ಲವೂ ಸಾಧ್ಯವಿದೆ. ಲೇಖಕರು ಹೇಳಿದಂತೆ ಯಾವುದು ಅಗತ್ಯ ಯಾವುದು ವ್ಯರ್ಥ ಎಂಬುದನ್ನು ಗುರುತಿಸಿಕೊಳ್ಳಬೇಕು. ಅದಕ್ಕೆ ತಕ್ಕಂತೆ ನಡೆಯಬೇಕಷ್ಟೆ.

—ತಾರಾ ಹೆಗಡೆ, ಸಿರಸಿ




## ಅರ್ಥಗರ್ಭಿತ ಸಂಚಿಕೆ

‘ಮುಂದೆ ಸಾಗಲಿ...’ (ಮಾ. 13) ಮಹಿಳಾ ದಿನದ ವಿಶೇಷ ಸಂಚಿಕೆ ಅರ್ಥಗರ್ಭಿತವಾಗಿದೆ. ಸಮುದ್ಯತಾ ಕಂಜರ್ಪಣೆ, ವಕೀಲೆ ಮಂಜುಳಾ ದೇವಿ ಅವರ ಬರಹಗಳು ಹಾಗೂ ಗುಜರಾತ್ ಲೇಖಕಿ ಹಿಮಾಂಶಿ ಶೆಲತ್ ಅವರ ಸಂದರ್ಶನ ವಾಸ್ತವಿಕವಾಗಿವೆ. ಮಹಿಳಾ ಸಬಲೀಕರಣದಲ್ಲಿ ಕ್ರಮಿಸಬೇಕಾದ ಹಾದಿ ದೊಡ್ಡದಿದೆ ಎಂಬುದನ್ನೂ ಸೂಚ್ಯವಾಗಿ ತಿಳಿಸಿವೆ.

—ಚೇತನಾ ಎಂ., ಬೆಂಗಳೂರು

## ಕಾನೂನಿನ ತಿಳಿವಳಿಕೆ

‘ಸಬಲೀಕರಣದ ಹಾದಿಯಲ್ಲಿ ಕಾನೂನಿನ ಊರುಗೋಲು’— ವಕೀಲೆ ಮಂಜುಳಾ ದೇವಿಯವರ ಬರಹ ಮಹಿಳಾಪರ ಇರುವ ಸಕಲ ಕಾನೂನುಗಳ ತಿಳಿವಳಿಕೆ ಮೂಡಿಸಿತು.

—ಕರ್ಣ ಎಸ್., ಮೂಡಬಿದರೆ

## ಉಳಿದಿರುವ ಪ್ರಶ್ನೆ!

‘ಗೆಲುವಿನ ಮಾನದಂಡ ಅಲ್ಲೂ ಪುರುಷ ಝುಂಡಾ?’ ಸಮುದ್ಯತಾ ಕಂಜರ್ಪಣೆ ಅವರ ಬರಹದಲ್ಲಿ ಹೆಣ್ಣು— ಗಂಡಿನ ಯಶಸ್ಸಿನ ನಿರ್ಣಾಯಕ ಅಂಶಗಳನ್ನು ಬಹಳ ಚೆನ್ನಾಗಿ ವಿಮರ್ಶೆ ಮಾಡಲಾಗಿದೆ. ಹೆಣ್ಣಿನೆಡೆಗಿನ ತಾರತಮ್ಯ ಮನೋಭಾವನೆಯನ್ನೂ ಬಿಡಿಸಿಡಲಾಗಿದೆ. ಲೇಖಕಿಯಂತೆ ನಮ್ಮಲ್ಲೂ ‘ಈ ಪೂರ್ವಗ್ರಹಗಳು ಬದಲಾಗುವುದು ಯಾವಾಗ’ ಎಂಬ ಪ್ರಶ್ನೆ ಹಾಗೇ ಉಳಿದಿದೆ.

—ಕೌಸಲ್ಯಾ, ಮೈಸೂರು

## ಸಂದರ್ಶನ

ಗುಜರಾತ್ ಲೇಖಕಿ ಹಿಮಾಂಶಿ ಶೆಲತ್ ಅವರ ಸಂದರ್ಶನ ಚೆನ್ನಾಗಿದೆ. ಅವರ ಸರಳತೆ ಮತ್ತು ದೃಷ್ಟಿಕೋನ ತುಂಬಾ ಅರ್ಥಪೂರ್ಣವಾಗಿದೆ. ಎಂ.ಎಸ್. ಆಶಾದೇವಿಯವರಿಗೆ ಧನ್ಯವಾದ.

—ರೂಪ, ಬೆಂಗಳೂರು
ಶೋಭಾ, ಉಜಿರೆ

## ಲೈಫು ಇಷ್ಟೇನೆ?

ಆಸರೆ (ಮಾ. 06, ಎಚ್.ಎಂ. ಕುಮಾರಸ್ವಾಮಿ) ಕಥೆ ಬರೀ ಕಥೆಯಲ್ಲ, ಜೀವನ. ಅದು ಜೀವನದ ವ್ಯಥೆಯೂ. ಕಂಡ ಕಂಡ ದೇವರುಗಳಿಗೆ ಹರಕೆ ಹೊತ್ತು ಪಡೆದ ಮಗ ಜೀವನಯಾತ್ರೆಯ ಕೊನೆಗಾಲದಲ್ಲಿ ತಂದೆ ತಾಯಿಗಳಿಗೆ ಆಸರೆಯಾದಾನಾ? ಮಗಳು ಆಸರೆಯಾದಾಳಾ? ಎಂದು ಭಯದಿಂದ ಹಲುಬುತ್ತಾ ಅನಂತದಲ್ಲಿ ಲೀನವಾಗುವ ಲೈಫು, ಇಷ್ಟೇನೆ?

—ದುಂಡಪ್ಪ ನಂದೆನ್ನವರ, ಬೆಳಗಾವಿ

## ಆಲೆಮನೆಯ ಅಮೃತ!

‘ಆಲೆಮನೆಯಲ್ಲಿ ಸಿಹಿ ಅಲೆಗಳು’ (ಮಾ. 13, ಪ್ರಸಾದ್ ಶೆಣೈ ಆರ್.ಕೆ.) ಲೇಖನ ಬಾಯಲ್ಲಿ ನಿರೂರಿಸಿತು!. ಹಿಂದೆಲ್ಲಾ ಮಲೆನಾಡಲ್ಲಿ ಕೋಣಗಳ ಗಾಣದಲ್ಲಿ ಕಬ್ಬು ಅರೆದು ಬೆಲ್ಲ ತಯಾರಾಗುತ್ತಿತ್ತು. ಸೂರ್ಯ ಮುಳುಗಿದ ನಂತರ ಉದಯವಾಗುವವರೆಗೆ ಕಬ್ಬು ಅರೆಯುತ್ತಿದ್ದರು. ವೈಜ್ಞಾನಿಕವಾಗಿ ಬಿಸಿಲ ರಾಸಾಯನಿಕ ಪಲ್ಲಟದಿಂದ ಹಾಲು, ಬೆಲ್ಲ ಕೆಡದಿರಲೆಂದು; ಬೆಲ್ಲದ ದೀರ್ಘಕಾಲ ಬಾಳಿಕೆಗೆ. ಈಗ ಆ ಸಂಪ್ರದಾಯಕ್ಕೆ ತಿಲಾಂಜಲಿ ಇಡಲಾಗಿದೆ. ನಾವಂತೂ ಪ್ರತಿವರ್ಷ ಆಲೆಮನೆ ಬೆಲ್ಲ ಕೊಂಡು ಬೇಸಿಗೆಯಲ್ಲಿ ದಿನವೂ ಲಿಂಬೆ, ಕಾಳುಮೆಣಸು ಪುಡಿ ಹಾಕಿ ಪಾನಕ ಮಾಡಿ ಸವಿಯುತ್ತಿದ್ದೇವೆ. ಮನೆಗೆ ಬಂದವರೂ ಸವಿ ನೋಡಿ ‘ಅಮೃತ’ ಎನ್ನುವ ಉದ್ಗಾರ! ಆಹಾ ಬೆಲ್ಲವೇ ಏನು ನಿನ್ನ ಸವಿಯ ಲೀಲೆ!.

—ನಗರ ಗುರುದೇವ್ ಭಂಡಾರ್ಕರ್, ಶಿವಮೊಗ್ಗ



## ರಸವತ್ತಾದ ವರ್ಣನೆ

ಕಣ್ಣಿಗೆ ಮುದವೆನಿಸುವ, ಆಕರ್ಷಕ ಚಿತ್ರಗಳು, ಕಬ್ಬು ಬೆಲ್ಲವಾಗಿ ಪರಿವರ್ತಿತವಾಗುವ ಪ್ರಕ್ರಿಯೆಯ ರಸವತ್ತಾದ ವರ್ಣನೆ. ಕಬ್ಬಿನ ಹಾಲಿನಲ್ಲೇ ಅದ್ದಿ ತೆಗೆದಂಥ ಕಾವ್ಯಮಯ ಭಾಷೆ!

—ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು

## ಸಿಹಿ ನೆನಪು

ಬಾಲ್ಯದಲ್ಲಿ ನಮ್ಮೂರಿನ ಆಲೆಮನೆಯಲ್ಲಿ ಬಿಸಿಬಿಸಿ ಬೆಲ್ಲ, ಕಾಕಂಬಿ ತಿಂದು ಬಾಯಿ ಸಿಹಿ ಮಾಡಿಕೊಂಡ ಸಿಹಿ ಅಲೆಗಳು ನೆನಪಾಗಿ ಬಾಯಲ್ಲಿ ಮತ್ತೆ ನೀರೂರಿಸುವಂತಿತ್ತು.

—ಎಸ್. ವಿಶ್ವನಾಥ ಐನಹಳ್ಳಿ, ಮೈಸೂರು

## ನಾಟಕ ಸ್ಪರ್ಧೆಗೆ ಆಹ್ವಾನ

ಮೈಸೂರು ಅಸೋಸಿಯೇಷನ್, ಮುಂಬಯಿ ಸಂಸ್ಥೆ ಶತಮಾನೋತ್ಸವದ ಅಂಗವಾಗಿ ‘ಮೈಸೂರು ಅಸೋಸಿಯೇಷನ್ ನೂರರ ನಲಿವು 1926–2026’ರ ಅಡಿ ವಿಶೇಷ ಜಾಗತಿಕ ಏಕಾಂಕ ನಾಟಕ ರಚನಾ ಸ್ಪರ್ಧೆ ಘೋಷಿಸಿದೆ.

ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕವಿಲ್ಲ. ಯಾವುದೇ ವಿಷಯದ ಕುರಿತು ನಾಟಕ ರಚಿಸಬಹುದು. ಪ್ರಥಮ ಬಹುಮಾನ 50 ಸಾವಿರ ರೂ, ಎರಡನೇ ಬಹುಮಾನ 30 ಸಾವಿರ ರೂ, ತೃತೀಯ ಬಹುಮಾನ 20 ಸಾವಿರ ರೂ. ಇರಲಿದೆ. ನಾಟಕ ಕನ್ನಡದಲ್ಲಿದ್ದು, ಸ್ವರಚಿತವಾಗಿರಬೇಕು, ಅನುವಾದ, ಅನುಕರಣೆ ಆಗಿರಕೂಡದು. ಬೇರೆಲ್ಲೂ ಪ್ರಕಟವಾಗಿರಬಾರದು.

ನಾಟಕ 30 ಪುಟಗಳನ್ನು ಮೀರಬಾರದು. ಇಮೇಲ್ ವಿಳಾಸ: nataka.nesaru@gmail.com.

ಬರೆದವರ ವಿವರ, ಮೊಬೈಲ್ ಸಂಖ್ಯೆ ಹಾಗೂ ಇಮೇಲ್ ಪ್ರತ್ಯೇಕ ಪುಟದಲ್ಲಿರಬೇಕು. ನಾಟಕ ತಲುಪಬೇಕಾದ ಕೊನೇ ದಿನ ಜೂನ್ 30. ವಿಳಾಸ: ಮೈಸೂರು ಅಸೋಸಿಯೇಷನ್, ಮುಂಬಯಿ, 393, ಬಾವ್‌ದಾಜಿ ರಸ್ತೆ, ಮಾತುಂಗ, ಮುಂಬಯಿ– 400019. ಸಂಪರ್ಕ ಸಂಖ್ಯೆ: 8369788157.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in